(ಇಂದು ದಿನಾಂಕ 04-12-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಪಿ.ಬಿ.ಟಿ. ವಕೀಲರಿಂದಃ**

2 ಎಕ್ಸರೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.46 ಮತ್ತು ನಿ.ಪಿ.47 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದ್ರುದಾರರ ಪರ ಶ್ರೀಮತಿ ಎಸ್.ಎಂ.ಹೆಚ್. ವಕೀಲರಿಂದ**

ನಾನು ರಾಮನಬೈಲ್‌ದಿಂದ ಯಲ್ಲಾಪುರಕ್ಕೆ ಹೋಗುತ್ತಿದ್ದೆ. ನಾನು ಆ ದಿನ ದ್ವಿಚಕ್ರ ವಾಹನದ ಮೇಲೆ ಹೋಗುತ್ತಿದ್ದೆ. ನಾನು ನನ್ನ ದ್ವಿಚಕ್ರ ವಾಹನವನ್ನು ತೆಗೆದುಕೊಂಡು ಹೋಗಿದ್ದೆ. ದ್ವಿಚಕ್ರ ವಾಹನ

ಎಂ.ವಿ.ಸಿ. ನಂ. 376/24

ಪಿ.ಡಬ್ಲ್ಯು. 1

ಚಾಲನಾ ಪರವಾನಿಗೆ ನನ್ನ ಬಳಿ ಇದ್ದು ಅದನ್ನು ಹಾಜರುಪಡಿಸಿದ್ದೇನೆ. ಆ ದಿನ ನಾನು ಒಬ್ಬನೇ ದ್ವಿಚಕ್ರ ವಾಹನದ ಮೇಲೆ ಹೋಗುತ್ತಿದ್ದೆ. ನಾನು ಸುಮಾರು 15-20 ಅಡಿ ದೂರದಿಂದ ಕಾರನ್ನು ನೋಡಿದ್ದೇನೆ. ಆ ದಿನ ಕಾರ್ ತನ್ನ ಎಡಬದಿಯಿಂದ ಹೋಗುತ್ತಿತ್ತು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ವಿರುದ್ಧ ದಿಕ್ಕಿನಲ್ಲಿ ಬರುತ್ತಿತ್ತು ಎಂದು ಹೇಳುತ್ತಾರೆ. ಕಾರ್ ಬರುತ್ತಿದ್ದರೂ ಸಹ ನಾನು ಒಮ್ಮಿಂದೊಮ್ಮೆಲೇ ರಸ್ತೆಯನ್ನು ದಾಟುತ್ತಿದ್ದೇನೆ ಎಂದರೆ ಸರಿಯಲ್ಲ.  ನಾನು ಕಾರ್ ಬರುವುದನ್ನು ನೋಡಿಯೂ ಸಹ ರಸ್ತೆ ದಾಟುತ್ತಿದ್ದುದರಿಂದ ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಕಾರಿನ ಚಾಲಕ ತನ್ನ ಕಾರನ್ನು ಎಡಗಡೆಯಿಂದ ನಿಧಾನವಾಗಿ ಮತ್ತು ಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬರುತ್ತಿದ್ದ ಎಂದರೆ ಸರಿಯಲ್ಲ. ಅಪಘಾತಕ್ಕೆ ಕಾರಿನ ಚಾಲಕನ ಯಾವುದೇ ತಪ್ಪು ಇಲ್ಲ ಅನ್ನುವುದು ಸರಿಯಲ್ಲ. ಯಲ್ಲಾಪುರ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಹಣ ತೆಗೆದುಕೊಳ್ಳುವುದಿಲ್ಲ ಎಂದರೆ ಸರಿ. ಯಲ್ಲಾಪುರದಲ್ಲಿ ಚಿಕಿತ್ಸೆ ತೆಗೆದುಕೊಂಡು ಅದೇ ದಿನ ಕಾರವಾರ ಆಸ್ಪತ್ರೆಗೆ ಬಂದು ಚಿಕಿತ್ಸೆ ತೆಗೆದುಕೊಂಡಿದ್ದೇನೆ. ಕಾರವಾರದಲ್ಲಿ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಹೋಗು ಎಂದು ಹೇಳಿದ್ದಕ್ಕೆ ಮಂಗಳೂರಿನ ಕೆ.ಎಸ್.ಹೆಗಡೆ ಆಸ್ಪತ್ರೆಗೆ ಹೋಗಿದ್ದೇನೆ. ಕೆ.ಎಸ್.ಹೆಗಡೆ ಆಸ್ಪತ್ರೆಯಲ್ಲಿ ನನಗೆ ಯಾವುದೇ ಶಸ್ತ್ರ ಚಿಕಿತ್ಸೆ ಆಗಿಲ್ಲ ಅನ್ನುವುದು ಸರಿಯಲ್ಲ. ನಾನು 22 ನೇ ತಾರೀಖಿನಿಂದ 31 ನೇ ತಾರೀಖಿನವರೆಗೆ ಒಳರೋಗಿಯಾಗಿ ಚಿಕಿತ್ಸೆ ತೆಗೆದುಕೊಂಡಿದ್ದೇನೆ. ನಾನು ಹಾಜರುಪಡಿಸಿದಂತಹ ಅಂತಿಮ ಬಿಲ್‌ನ ಪ್ರಕಾರ ನಾನು ದಿನಾಂಕ 22-06-2024 ರಿಂದ 28-06-2024 ರವರೆಗೆ ಚಿಕಿತ್ಸೆ ತೆಗೆದುಕೊಂಡಿದ್ದೇನೆ ಎಂದು ನಮೂದಿಸಲಾಗಿದೆ ಎಂದರೆ ಸರಿ.  ಸದರಿ ಬಿಲ್‌ನಲ್ಲಿ ಆಪರೇಷನ್ ಚಾರ್ಜನ್ನು ಮತ್ತು ಆಪರೇಷನನ್ನು ಆಗಿರುವ ಬಗ್ಗೆ ಮತ್ತು ಇಂಪ್ಲಾಟ್ ಅಳವಡಿಸಿರುವ ಬಗ್ಗೆ ನಮೂದಿಸಿಲ್ಲ ಎಂದರೆ ಸಾಕ್ಷಿ ಕೆಲವು ಬಿಲ್ ನಮ್ಮ ತಂದೆಯ ಬಳಿ ಇವೆ ಎಂದು ಹೇಳುತ್ತಾರೆ. ನಾನು ಹಾಜರುಪಡಿಸಿದ ಬಿಲ್‌ನ್ನು ಬಿಟ್ಟು ಬೇರೆ ಬಿಲ್‌ಗಳನ್ನು ನನಗೆ ಕೊಟ್ಟಿದ್ದಾರೆ. ಸದರಿ ಬಿಲ್‌ಗಳನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ಕೆಲವು

ಎಂ.ವಿ.ಸಿ. ನಂ. 376/24
ಪಿ.ಡಬ್ಲ್ಯು. 1

ಬಿಲ್‌ಗಳು ಕಳೆದುಹೋಗಿವೆ, ಆದ್ದರಿಂದ ಹಾಜರುಪಡಿಸಿಲ್ಲ. ಕಳೆದುಹೋದಂತಹ ಬಿಲ್‌ಗಳನ್ನು ನಾನು ಆಸ್ಪತ್ರೆಯಿಂದ ತೆಗೆದುಕೊಂಡು ಬಂದು ಹಾಜರುಪಡಿಸಿಲ್ಲ. ನನಗೆ ಯಾವುದೇ ಶಸ್ತ್ರಚಿಕಿತ್ಸೆ ಆಗಿಲ್ಲ ಅನ್ನುವುದು ಸರಿಯಲ್ಲ ಮತ್ತು ಯಾವುದೇ ಇಂಪ್ಲಾಂಟ್‌ನ್ನು ಅಳವಡಿಸಿಲ್ಲ ಅನ್ನುವುದು ಸರಿಯಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಧನ ಬರಲಿ ಎಂದು ಸುಳ್ಳು ಬಿಲ್‌ಗಳನ್ನು ಸೃಷ್ಠಿ ಮಾಡಿಕೊಂಡು ಬಂದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಕಾರಿನ ಚಾಲಕನ ತಪ್ಪಿನಿಂದ ಅಪಘಾತ ಆಗದೇ ಇರುವುದರಿಂದ 2 ನೇ ಎದುರುದಾರರು ಪರಿಹಾರ ಧನ ಕೊಡಲು ಬಾಧ್ಯಸ್ಥರಲ್ಲ ಅನ್ನುವುದು ಸರಿಯಲ್ಲ. ಆಸ್ಪತ್ರೆಯವರು ಕೊಡಬೇಕಾದ ಯಾವುದೇ ಬಿಲ್‌ಗಳು ಇಲ್ಲ ಅನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ, ಕಾರವಾರ